ಇಲ್ಲಿ ಯಾರೂ ಬಳೆ ತೊಟ್ಕಂಡಿಲ್ಲ' ಎಂದವಳು, 'ನೀನೇನು ಆ ಮಲ್ಲನ್ನೂಟೆ ಜಾಸ್ತಿ ಮಾತಾಡ್ಬೇಡ, ಬಾ ಹೋಗನ' ಎಂದು ಅಲ್ಲಿಂದ ಹೊರಟಳು. ಈ ದುಷ್ಕೃತ್ಯವನ್ನು ನೋಡಿಯೂ ನೋಡದವನ ಹಾಗೆ ಚಕಾರವೆತ್ತದೆ ಸಹಿಸಿಕೊಂಡು ಕುಂಟುತ್ತಾ ಕುಂಟುತ್ತಾ ಹುಚ್ಚಮ್ಮನನ್ನು ಹಿಂಬಾಲಿಸಿದ.

'ಅಯ್ಯಯ್ಯಪ್ಪೋ ಅಯ್ಯಯ್ಯಪ್ಪೋ ಹೊಡಿಬ್ಯಾಡ ಕಣವ್ವೋ... ನಿನ್ ಸತ್ಯವಾಗ್ಲೂ ನಾನು ಕಣದೊಳಗೆ ಹೋಗಿಲ್ಲ. ನನ್ನ ಮಾತ್ ಕೇಳವ್ವೋ' ಅನ್ನುತ್ತ ತ್ಯಾಗನು ಅವರವ್ವನ ಕೈ ಕಾಲು ಹಿಡಿದು ಅಂಗಲಾಚುತ್ತಿದ್ದ. ಸಿಟ್ಟಲ್ಲಿದ್ದ ದ್ಯಾವಕ್ಕ 'ಏನು ನಿನ್ನ ಮಾತ್ ಕೇಳದು. ನೀನು ಹುಟ್ಲಾಗಿ ಕೇಳಬಾರದವ್ರ ಬಾಯಲ್ಲಿ ಒಂದೊಂದು ಮಾತು ಕೇಳಂಗಾಯ್ತು' ಎಂದವಳು, ಆ ಬೈಗುಳ ನೆನೆದು ಪಿತ್ತ ನೆತ್ತಿಗೇರಿ ತ್ಯಾಗನ ಮುಖಕ್ಕೆ ತಿವಿದು ಅಲ್ಲೇ ಒಂದು ಹುಣಸೆ ಕೋಲು ಸರ್ರನೆ ಎಳೆದು ಫೈಡ್ ಫೈಡನೆ ಹೊಡೆದಳು. ಆ ಏಟಿಗೆ ಅಯ್ಯಯ್ಯಪ್ಪೋ ಎಂದು ಬಿದ್ದು ಹೊರಳಾಡಿದ. ಆ ವಾತಾವರಣ ಅಲ್ಲಿದ್ದವರೆಲ್ಲರ ಮನಸ್ಸಲ್ಲೂ ಬೇಸರ ತರಿಸಿತ್ತು. ಅಲ್ಲೇ ಇದ್ದ ಯಾವುದೋ ಊರಿನಿಂದ ಬಂದ ನೆಂಟರೊಬ್ಬರು 'ಅಯ್ಯೋ ಬಿಡು ತಂಗಿ, ಹೊಡಿಬ್ಯಾಡ' ಎಂದು ತನ್ನತ್ತ ಎಳೆದುಕೊಂಡು ತ್ಯಾಗನಿಗೆ ಬೀಳುತ್ತಿದ್ದ ಏಟುಗಳನ್ನು ತಪ್ಪಿಸಿ ಮರುಗಿದರು. ಅದ್ಯಾವುದೋ ಎಮ್ಮೆಯ ವಿಚಾರವಾಗಿ ಗವಿರಂಗಣ್ಣ ಮಾತಲ್ಲಿ ಮಗ್ನರಾಗಿದ್ದವರು ತ್ಯಾಗನನ್ನ ನೋಡಿದರು. ಅವರಿಗೂ ಕರುಳು ಚುರುಕ್ ಅಂದು ಎಳೆ ಜೀವಕ್ಕೆ ಅಂಥಾ ಏಟು ಹೊಡೆದಿರುವುದು ಬೇಸರ ತಂದಿತು. ಬೇಸರದಿಂದಲೆ 'ಲೇ ಪಾಪ, ಈ ಆಟ ಎಲ್ಲ ಬಿಟ್ಟು ಶಾಲೆಗೋಗಿ ನಾಕಕ್ಷರ ಕಲಿ. ನಾಳೆ ಅದೇ ತಲೆ ಕಾಯುತ್ತೆ' ಎಂದರು.

ದ್ಯಾವಕ್ಕ ಸೆರಗಲ್ಲಿ ಕಣ್ಣೀರು ವರೆಸಿಕೊಳ್ಳುತ್ತಾ 'ನೀವಾರ ಹೇಳಿ, ನಾನೆಷ್ಟು ಹೇಳಿದ್ರೂ ಎಷ್ಟ್ ಬಡ್ಕಂಡ್ರೂ ಜಪ್ಪಯ್ಯ ಅನ್ನಲ್ಲ'.

'ಅಮ್ಮೋ ಅಂಗೆಲ್ಲಾ ಮಕ್ಳಿಗೆ ಹೊಡಿಬಾರ್ದು ಕಣಮ್ಮ. ಹೆಣ್ಣುಮಗಳಿಗೆ ಸಹನಾಶಕ್ತಿ ಇರಬೇಕು. ಸುಮ್ಮನೆ ಮನೆಗೆ ಕರ್ಕಂಡೋಗು' ಅಂತಂದವರು, ಚಿಕ್ಕವಯಸ್ಸಿನಲ್ಲೇ ಗಂಡನ ಕಳೆದುಕೊಂಡು ಒಂಟಿ ಜೀವನ ಸಾಗಿಸುತ್ತಿರುವ ಈ ದೊಡ್ಡ ಸಹನೆಗಿಂತ ಇನ್ನೊಂದು ಉದಾಹರಣೆ ಬೇಕೆ ಎಂಬುದು ಅರಿವಿಗೆ ಬಂದು ಗವಿರಂಗಣ್ಣ ಎಚ್ಚರಾದರು. ಇದ್ದಕ್ಕಿದ್ದಂತೆ ಅದೇನೋ ನೆನಪಾದವರಂತೆ, 'ಒಂದು ಕೆಲ್ಸ ಮಾಡಮ್ಮ, ಈ ಹುಡುಗನ್ನ ಕೆರಗೋಡಿ ರಂಗಾಪುರದ ಮಠಕ್ಕೆ ಹಾಕು, ನಾನೇಳ್ತೀನಿ' ಅನ್ನುತ್ತ ಮುಂದೆ ಹೆಜ್ಜೆ ಹಾಕಿದ ಗವಿರಂಗಣ್ಣ, 'ಬ್ಯಾಡ, ಅದು ಹತ್ರ ಆಗುತ್ತೆ. ಹತ್ರ ಆಯ್ತು ಅಂದ್ರೆ ನೀನು ಹೋಗ್ತಾ ಬತ್ತಾ ಇರ್ತೀಯ. ಇದರಿಂದ ಈ ಹುಡುಗನಿಗೆ ಓದೋ ಆಸೆ ಬಿಟ್ಹೋಗುತ್ತೆ. ಸ್ವಲ್ಪ ದೂರಾನೇ ಇರಲಿ, ಸಿದ್ಧಗಂಗೆ ಮಠಕ್ಕೆ ಸೇರಿಸು' ಎಂದರು.

ತ್ಯಾಗನಿಗೆ ಕಣ್ಣೀರಿನ ಜೊತೆಗೆ ಗೊಣ್ಣೆಯೂ ಸೇರಿ ಒಟ್ಟಿಗೆ ಹರಿಯುತ್ತಿತ್ತು. ತೊಟ್ಟಿದ್ದ ಅಂಗಿಯ ಒಂದು ಮೂಲೆಯನ್ನು ಮೂಗಿನ ಮಟ್ಟಕ್ಕೆ ಎತ್ತಿ ವರೆಸಿಕೊಳ್ಳುತ್ತ ನಡೆಯುತ್ತಿದ್ದ. ದುಃಖದ ಬಿಕ್ಕಳಿಕೆ ಅವನ ದೇಹವನ್ನು ಅಲುಗಿಸುತ್ತಿತ್ತು. ದ್ಯಾವಕ್ಕ ಗವಿರಂಗಣ್ಣನ ಮಾತು ಕೇಳಿ ತಾನು ಮಾತಾಡುವುದನ್ನು ಪೂರ್ತಿಯಾಗಿ ಹತೋಟಿಯಲ್ಲಿ ತಂದುಕೊಂಡಳು. ಗವಿರಂಗಣ್ಣನ ಹೆಜ್ಜೆ ಬಿರುಸಾದವು. 'ಅಷ್ಟು ಮಾಡಿ, ಎಲ್ಲಾದರೂ ಇರಲಿ... ನನಗೂ ಸಾಕಾಗೋಯ್ತು, ಕಣ್ಣಿಗೆ ಮರೆಯಾಗಿದ್ರೆ ಇಂಥವ್ಕೆ ಬುದ್ಧಿ ಬರದು' ಎಂದಳು ದ್ಯಾವಕ್ಕ.

ಆ ಮಾಳದ ಕಡೆಯಿಂದ ಊರಿನ ಕಡೆ ಗವಿರಂಗಣ್ಣ ಬರುತ್ತಿದ್ದಂತೆ ಹಸು ಕರುಗಳಿಗೆ ಹಗ್ಗ ಬಿಡ್ತ ಹೊರಗೇ ಕುಳಿತಿದ್ದ ಬಸಪ್ಪ 'ಅದೇನ್ ಗಲಾಟೆ' ಎಂದು ಪ್ರಶ್ನಾರ್ಥಕ ದೃಷ್ಟಿ ಬೀರಿದರು. ಅದಕ್ಕೆ ಗವಿರಂಗಣ್ಣ 'ಅಯ್ಯೋ ಅದು ಆ ಮಲ್ಲಂದು, ಮತ್ತೆ ಆ ಸಿದ್ದನ ಹುಡುಗಂದು' ಅಂದು ಮಾತು ಮುಗಿಸುವ ಹೊತ್ತಿಗೆ ಒಳಗಿದ್ದ ರಾಮಕ್ಕನೂ ಆಚೆ ಬಂದು, 'ಅಯ್ಯೋ ಅದೇನ್ ಮಾಡ್ತು. ಆ ಹುಡುಗ ಇಷ್ಟೊತ್ತೂ ಇಲ್ಲೇ ಬೀದೀಲಿ ಆಡ್ತಿತ್ತು' ಅನ್ನುತ್ತಲೂ ಉತ್ತರಕ್ಕಾಗಿ ಕಾದಳು.

'ಈ ಮಲ್ಲ ಕಣ ಸಾರಿಸಿದ್ನಂತೆ. ಈ ಹುಡುಗ ಅದ್ರೊಳಗೆ ಓಡಾಡಿ ಹೆಜ್ಜೆ ಗುರುತ ಮಾಡ್ತಂತೆ, ಅದ್ನ ನೋಡಿ ಅಯ್ಯೋ ಮತ್ತೆ ಕಣ ಸಾರಿಸ್ಬೇಬೇಕಾಗಿ ಬಂತಲ್ಲ ಅನ್ನೋ ಸಿಟ್ನಲ್ಲಿ ಆ ಮಲ್ಲ ಈ ಹುಡುಗಂಗೆ ಬಾರ್ಕೋಲಲ್ಲಿ ಬಾರಿಸವ್ನೆ. ಆ ಸುದ್ದಿ ತಿಳಿದು ನಾನು ಕಣಕ್ಕೆ ಓಡಿಹೋದೆ. ಆ ಹುಡುಗ ಉಸಿರು ತಿರುಗಿಸ್ಕಳಕ್ಕೂ ಪುರುಸೊತ್ತು ಕೊಡ್ದಂಗೆ ದನಕ್ಕೊಡ್ದಂಗೆ ವಡ್ದವ್ನೆ, ಕೈಕಾಲು ಮುಖ ಮೋರೆ ಕಿವಿ ಕಿತ್ಹೋಗುವಂತೆ' ಎಂದ. ಆ ಮಾತಿಗೆ ಲೊಚಗುಟ್ಟಿದ ರಾಮಕ್ಕ ಅಚ್ಚರಿಪಟ್ಟು ಹೇಳಿದಳು, 'ಅಯ್ಯೋ ಅಂಗೊಡ್ಯಾದ, ತುಣುದ್ರೆ ತುಣಿತು. ಬೇಕಾದ್ರೆ ಇನ್ನೊಂದ್ಸಾರಿ ಕಣ ಸಾರಿಸ್ ಬಹುದಿತ್ತು. ಮಗಿಗೆ ಎಲ್ಲಾರ ಆಯ್ಕಟ್ಟಿನ ಜಾಗಕ್ಕೆ ಪೆಟ್ಟು ಬಿದ್ದು ಏನಾದರೂ ಆಗಿದ್ರೆ ಏನ್ ಗತಿಯಮ್ಮ' ಎಂದು ಸೋಜಿಗದಲ್ಲಿ ನಿಂತಳು.

ಮತ್ತದೇನೋ ನೆನಪಾದಂತೆ 'ಈ ಮಲ್ಲಂಗೆ ಆಗ್ಲೇ ಒಂದ್ಸಾರಿ ಪೂಜೆ ಆಗಯ್ತೆ, ಈ ನನ್ಮಗನಿಗೆ ಇನ್ನೂ ಬುದ್ಧಿ ಬಂದಂಗಿಲ್ಲ. ಇಂಥವ್ಕೆ ಯಾರೇಳ್ತಾರೆ. ಅಲ್ಲ ಈ ಹುಡುಗನೇ ಕಣದಲ್ಲಿ ಕಾಲಿರಿಸಿದ್ದು ಅಂತ ಮಲ್ಲುಂಗೆ ಯಂಗೆ ತಿಳಿತು?' ಅಂತ ರಾಮಕ್ಕ ಗೊಣಗಿದಳು.

ಈ ಮಾತಿಗೆ ಗವಿರಂಗಣ್ಣ 'ಬೆಳಿಗ್ಗೆ ಕಣ ಒಣಗಿದಿಯೋ ಇಲ್ವೋ ಎಂದು ನೋಡ್ಕ ಬರಕ್ಕೆ ಅಂತ ಮಲ್ಲ ಹೋಗಿದ್ನಂತೆ. ಅದ್ರೊಳಗೆ ಬಿದ್ದ ಹೆಜ್ಜೆ ಗುರುತು ದಪ್ಪ–ಉದ್ದ ಅಳತೆ ನೋಡಿಯೇ ದಂಗಾಗಿ, ಅಲಲಲಲಾ ಯಾರೀ ಕೆಲಸ ಮಾಡ್ದೋರು? ಈ ಬೀದ್ಯಾಗೆ ಇಂಥಾ ಹೆಜ್ಜೆಗುರುತು ಇರೋ ಹುಡುಗ್ರು ಯಾರು ಅಂತ ಜಾತಿ ಹಿಡಿದು ಯೋಚಿಸಬೇಕಾದ್ರೆ ಇಂತ ಐನಾತಿ ಕೆಲಸ ಆ ಸಿದ್ದನ್ ಮಗುಂದೆ, ಮತ್ತಿನ್ಯಾರ್ದು ಅಲ್ಲ ಅಂತ, ಇಲ್ಲೇ ಎಲ್ಲೋ ಆಡ್ತಿದ್ದ ಮಗನ ಯಳ್ಕಂಡೋಗಿ ಕಣದಲ್ಲಿ ಮೂಡಿದ್ದ ಹೆಜ್ಜೆ ಗುರುತೊಳಗೆ ಹೆಜ್ಜೆ ಇಡಿಸಿ ಗೋಚರವಾದದ್ದೇ ತಡ ಅಲ್ಲಿಂದಲೇ ಹೊಡಿಯಾಕೆ ನಿಂತವನೆ' ಎಂದ. ಆ ಮಾತಿಗೆ ಲೊಚಗುಟ್ಟಿದ ರಾಮಕ್ಕ 'ಆಡೋ ವಯಸ್ಸು ಆಡುತ್ತೆ, ಅದಕ್ಕೇ ಹಿಡಿದು ಹೊಡೆಯೋದಾ?' ಎಂದಳು. 'ಹುಡುಗಾಟ ಅಲ್ಲ ಕಣಮ್ಮೋ' ಎಂದ ಗವಿರಂಗಣ್ಣ, 'ಆ ಹುಡುಗನ ಬೆನ್ನಮೇಲೆ, ಮೈಮೇಲೆ ರಪ್‌ರಪ್ ಎಂದು ಬೀಳುತ್ತಿದ್ದ ಬಾರ್ಕೋಲಿನ ಹೊಡೆತಕ್ಕೆ ವಿಲವಿಲ ವದ್ದಾಡಿದ್ದ. ಕಣದಲ್ಲಿ ಹಾಹಾಕಾರವೆದ್ದಿತ್ತು. ಏಟು ಅಂದ್ರೆ ಅಂತಿಂಥ ಏಟಲ್ಲ' ಎಂದು ಹೇಳುತ್ತಾ ಕೊರಳ ಸುತ್ತ ಹಾಗೆ ಹಣೆಯ ಮೇಲೆ ಮೂಡಿದ ಬೆವರ ಹನಿಗಳನ್ನು ಅಂಗಿಯ ಒಂದು ಮೂಲೆಯಲ್ಲಿ ಗವಿರಂಗಣ್ಣ ವರಸಿಕೊಳ್ಳುತ್ತಲೇ ಮಾತಾಡಿದ: 'ನಿದ್ರೇಲೂ ಈ ಮಗ ಬೆಚ್ಚಿ ಬೀಳ್ಬೇಕು ಅಂತಾ ಏಟು' ಎಂದ. ಆ ಹುಡುಗ ಹಿಂಸೆಗೆ ಈಡಾದ ಅನ್ನೋದು ಗವಿರಂಗಣ್ಣನ ದನಿಯಲ್ಲಿ ಇತ್ತಾದರೂ, ಅವನ ಒಳಮನಸ್ಸು ಸಣ್ಣಪುಟ್ಟ ಜಾತಿಯ ಜನಗಳು ಈ ನೆಲದಲ್ಲಿ ತಲೆಮರೆಸಿಕೊಂಡಂತೆ ಬದುಕಬೇಕೆ? ಬೀದಿಯಲಿ ತಲೆ ಎತ್ತಿ ನಡೆಯಬಾರದೆ? ಈ ಜನಕ್ಕೆ ಬಡಿದ ಶಾಪವೇ? ಎಂದು ಯೋಚಿಸುತ್ತಿತ್ತು.

ಇದರ ಮಧ್ಯ 'ಮಕ್ಳು ಮರಿ ಜೊತೆಗೆ ಓಡಾಡಿ ಬೆಳೆದಿದ್ರೆ ಆ ಮಲ್ಲನಂಥವರಿಗೆ ಅರ್ಥವಾಗ್ತಿತ್ತು' ಅಂದ ರಾಮಕ್ಕ, 'ಈ ದ್ಯಾವಕ್ಕ ಆ ತರ ವಡಿಯೋಕೆ ಸುಲಭಕ್ಕೆ ಬಿಡೋಳಲ್ಲ, ಏನಾಯ್ತೋ' ಎಂದಳು.

ಗವಿರಂಗಣ್ಣ 'ಎಲ್ಲೋ ಆಡ್ತಿದ್ದ ಮಗನ ಯಳ್ಕಂಡೋಗಿ ಹೊಡುದ್ರೆ ಅವಮ್ಮ ತಾನೆ ಏನ್ಮಾಡುತ್ತೆ' ಅಂದ. ಆ ಮಾತಿಗೆ ಪೂಜಾರಪ್ಪ ಮಧ್ಯ ಬಾಯಾಕಿ, 'ತಪ್ಪಿರಬಹುದು. ಆದರೆ ಬೀದೀಲಿ ಮರ್ಯಾದೆ ತಗಿಯೋವಂಥದ್ದು ಏನಿರಲಿಲ್ಲ ಬಿಡಿ' ಅಂದನು. ಅದಕ್ಕೆ ಗವಿರಂಗಣ್ಣ 'ಇಲ್ಲ ಬಸಪ್ಪ, ಅಂತಿಂಥಾ ಏಟಲ್ಲ. ಜನ್ಮಾಂತರ ಅನ್ನೋದೇನಾದ್ರೂ ಇದ್ರೆ, ಮುಂದಿನ ಜನ್ಮದಲ್ಲೂ ಕಣ ಅನ್ನಾದು ಕನಸಾಗೆ ಬಂದರೂ ಸಾಕು, ಆ ಹುಡುಗ ಹುಚ್ಚೆ ಹುಯ್ಕತನೆ. ನಾವಿವತ್ತು ಯಾರಿಗೇಳದು. ಯಾರು ಮಾಡಿದ್ರೂ ತಪ್ಪು ತಪ್ಪೇ' ಅಂದ ಗವಿರಂಗಣ್ಣ.

ಟೈಮಾಯಿತು ಅನ್ನೋದನ್ನ ಮನಗಂಡ ಬಸಪ್ಪ 'ಹೋಗಿ ಹೋಗಿ ನಮ್ಮವಳಿಗೆ ಹೇಳ್ತಿರಲ್ಲ, ಇವಳಿಗೆ ಎಷ್ಟೇಳಿದ್ರೂ ಅರ್ಥ ಆಗ್ಬೇಕಲ್ಲಾ? ನೀವು ಹೊಲಕ್ಕೋ ತೋಟಕ್ಕೋ ಹೋಗೋದು ಇರುತ್ತೆ. ಇಂಥದ್ದೆಲ್ಲ ಒಬ್ಬರು ಹೇಳಿದರೆ ಬರಲ್ಲ. ಅದು ಒಳಗಿನಿಂದಲೇ ಹುಟ್ಟಿ ಬರಬೇಕು' ಅಂದೋನು ಹೆಂಡ್ತಿ ರಾಮಕ್ಕನಿಗೆ ಗದರಿ, 'ಅದೇನ್ ನಿನ್ ಕೆಲ್ಸ ನೋಡು' ಎಂದವರು, ಈ ಮೂವರ ದುಗುಡಕ್ಕೆ ಕಾರಣನಾದ ಹುಡುಗ ಅವರ ಅಂತಃಕರಣವನ್ನು ವ್ಯಾಪಿಸಿದ.

ಗವಿರಂಗಣ್ಣ ಅಂಚೆಯವನು ಕೊಟ್ಟ ಪತ್ರ ಓದುತ್ತಾ 'ಬಾಳೆ ಯಂಗೈತೆ, ಕರೆಂಟು ಎಷ್ಟು ಗಂಟೆಗೆ ಕೊಡ್ತಾರೆ' – ಹಿಂಗೆಲ್ಲ ಪತ್ರದಲ್ಲಿ ಬರೆದ ಮಗ ಮುಂದುವರೆದು, ಈ ವರ್ಷ ತಾನು ಕಾಲೇಜಿಗೆ ಫಸ್ಟ್ ಬಂದಿರುವುದನ್ನು, ಅವನಿಗೆ ಸನ್ಮಾನ ಇಟ್ಟುಕೊಂಡಿರುವುದನ್ನೆಲ್ಲ ಹಂಚಿಕೊಂಡಿದ್ದ. ನಿನ್ನ ತಂದೆ ತಾಯಿನ ಕರ್ಕಂಡು ಬಾ ಅಂದಿದ್ದನ್ನು ಮರೆಯದೆ ತಿಳಿಸಿದ್ದ. ಆ ವರ್ಷ ಹುಬ್ಬಳ್ಳಿಯಲ್ಲಿ ಮೆಡಿಕಲ್ ಓದುತ್ತಿರುವ ಮಗ ನಂಜುಂಡ ಡಿಸ್ಟಿಂಕ್ಷನ್ ಬಂದ ಖುಷಿಯನ್ನು ಬರೆದಿದ್ದ.

ಆ ಪತ್ರ ಓದಿದ ಗವಿರಂಗಣ್ಣ ಆತುರಾತುರವಾಗಿ